# ಸಮೃದ್ಧ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸಂಘ ಲಿ.,

**ನಂ. 518/ಎ, 3ನೇ ಮುಖ್ಯರಸ್ತೆ, ಬನಶಂಕರಿ 1ನೇ ಹಂತ, ಶ್ರೀನಗರ, ಬೆಂಗಳೂರು – 560 050.**
**ದೂರವಾಣಿ ಸಂಖ್ಯೆ: 080 2650 8802 / 72043 77607**

## 2025–26ನೇ ಸಾಲಿನ 32ನೆಯ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

**ಮಾನ್ಯ ಸದಸ್ಯರೇ,**

ಸಂಘದ ಎಲ್ಲಾ ಸದಸ್ಯರಿಗೂ ಈ ಮೂಲಕ ಸೂಚಿಸುವುದೇನೆಂದರೆ, 2025 – 26ನೇ ಸಾಲಿನ ಸಂಘದ ಮೂವತ್ತೆರಡನೆಯ ಸರ್ವಸದಸ್ಯರ ಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀಯುತ. ಜೆ.ವಿ.ಮಧುಕೇಶ್ವರರವರ ಅಧ್ಯಕ್ಷತೆಯಲ್ಲಿ ದಿನಾಂಕ 20–09–2026 ರಂದು ಭಾನುವಾರ ಬೆಳಿಗ್ಗೆ 11–00 ಘಂಟೆಗೆ, ಸ್ವಾಮಿ ವಿವೇಕಾನಂದ ಎಜುಕೇಷನಲ್ ಸೊಸೈಟಿ (ರಿ) ನಂ. 5ಎ, 3ನೇ ಅಡ್ಡರಸ್ತೆ, 2ನೇ ಬ್ಲಾಕ್ ಬನಶಂಕರಿ 1ನೇ ಹಂತ, ಬೆಂಗಳೂರು–560050 ನಲ್ಲಿ ಕರೆಯಲಾಗಿದೆ, ಮಾನ್ಯ ಸದಸ್ಯರು ಸಕಾಲಕ್ಕೆ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

### ವಿಷಯಗಳು

1. ಪ್ರಾರ್ಥನೆ
2. ಜ್ಯೋತಿ ಬೆಳಗುವ ಕಾರ್ಯಕ್ರಮ
3. ರಾಷ್ಟ್ರಗೀತೆ
4. ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು
5. ಶ್ರದ್ಧಾಂಜಲಿ
6. ಅಧ್ಯಕ್ಷರಿಂದ ಸ್ವಾಗತ
7. ದಿನಾಂಕ 14–09–2025ರಂದು ನಡೆದ ಮೂವತ್ತೊಂದನೆಯ ಸರ್ವಸದಸ್ಯರ ಸಭೆಯ ನಡವಳಿಗಳ ಮಂಡನೆ ಮತ್ತು ಅಂಗೀಕಾರ
8. 2025–26ನೇ ಸಾಲಿನ ಆಡಿಟರ್‌ರವರಿಂದ ಪರಿಶೀಲನೆಗೆ ಒಳಪಟ್ಟ ಜಮಾ–ಖರ್ಚು ತಃಖ್ತೆ, ಲಾಭ–ನಷ್ಟ ತಃಖ್ತೆ ಮತ್ತು ಆಸ್ತಿ–ಜವಾಬ್ದಾರಿಗಳ ಮಂಡನೆ ಮತ್ತು ಅಂಗೀಕಾರ
9. 2026–2027ನೇ ಸಾಲಿನ ಉದ್ದೇಶಿತ ಬಜೆಟ್ ಮಂಡನೆ ಮತ್ತು ಅನುಮೋದನೆ
10. 2026–27ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅನುಮೋದನೆ
11. 2025–2026ನೇ ಸಾಲಿನ ನಿವ್ವಳ ಲಾಭದ ವಿಂಗಡನೆ ಮತ್ತು ವಿತರಣೆ
12. 2025–26ನೇ ಸಾಲಿನ ಡಿವಿಡೆಂಡ್ ಘೋಷಣೆ
13. ಪ್ರತಿಭಾ ಪುರಸ್ಕಾರ
14. ಇತರೆ ವಿಷಯಗಳು – ಅಧ್ಯಕ್ಷರ ಅಪ್ಪಣೆಯ ಮೇರೆಗೆ
15. ವಂದನಾರ್ಪಣೆ

**ದಿನಾಂಕ: 04–09–2026.**
**ಸ್ಥಳ: ಬೆಂಗಳೂರು.**

**ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ**
**ಸಹಿ/–**
**ತೇಜಸ್ವಿನಿ ಡಿ.**
**ಮುಖ್ಯ ಕಾರ್ಯನಿರ್ವಹಣಾಧಿಕಾರಿ**

### ವಿಶೇಷ ಸೂಚನೆ

1. ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಏನಾದರೂ ಇದ್ದಲ್ಲಿ ದಿನಾಂಕ: 13/09/2026ರ ಮುಂಚಿತವಾಗಿ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಕಛೇರಿಯ ವ್ಯವಹಾರದ ವೇಳೆಯಲ್ಲಿ ತಲುಪಿಸತಕ್ಕದ್ದು.
2. ಗುರುತಿನ ಚೀಟಿ ಮತ್ತು ಷೇರು ಪತ್ರವನ್ನು ಪಡೆಯದಿರುವ ಸದಸ್ಯರು ತಮ್ಮ ಇತ್ತೀಚಿನ ಒಂದು ಭಾವಚಿತ್ರವನ್ನು ಕೊಟ್ಟು ಸಂಘದ ಕಛೇರಿಯ ವ್ಯವಹಾರದ ವೇಳೆಯಲ್ಲಿ ಪಡೆಯಬೇಕೆಂದು ವಿನಂತಿ.
3. ಸದಸ್ಯರಿಗೆ ಮಾತ್ರ ಪ್ರವೇಶ. ದಯಮಾಡಿ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರುವುದು.
4. ಲೆಕ್ಕಪರಿಶೋಧಕರ ವರದಿಯನ್ನು 10–09–2026ರ ನಂತರ ಕಛೇರಿಯ ವ್ಯವಹಾರದ ವೇಳೆಯಲ್ಲಿ ಪಡೆಯಬೇಕೆಂದು ವಿನಂತಿ.

**ಸಮೃದ್ಧ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸಂಘ ಲಿ.,**
ನಂ. 518/ಎ, 3ನೇ ಮುಖ್ಯರಸ್ತೆ, ಬನಶಂಕರಿ
1ನೇ ಹಂತ, ಶ್ರೀನಗರ, ಬೆಂಗಳೂರು – 560 050.

## 2025–26ನೇ ಸಾಲಿನ ಪ್ರತಿಭಾ ಪುರಸ್ಕಾರದ ನಿಯಮಗಳು

ಎಸ್.ಎಸ್.ಎಲ್.ಸಿಯಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕಗಳು, ದ್ವಿತೀಯ ಪಿ ಯು ಸಿ ಯಲ್ಲಿ ಶೇಕಡ 75ಕ್ಕಿಂತ ಹೆಚ್ಚು ಅಂಕಗಳು, ಅಂತಿಮ ಪದವಿ ಪರೀಕ್ಷೆಯಲ್ಲಿ ಶೇಕಡ 70ಕ್ಕಿಂತ ಹೆಚ್ಚು ಅಂಕಗಳು, ಪ್ರತಿ ವಿಷಯದಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕಗಳು, ಪ್ರಥಮ ಭಾಷೆ ಕನ್ನಡದಲ್ಲಿ ಶೇಕಡ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ, ಮತ್ತು ಅಂತಿಮ ವರ್ಷದ ವೃತ್ತಿ–ಪರ, ತಾಂತ್ರಿಕ, ಸ್ನಾತ್ತಕೋತ್ತರ, ಹಾಗೂ ಡಿಪ್ಲೋಮೊಗಳಲ್ಲಿ ಶೇಕಡ 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾಗಿರುತ್ತಾರೆ.

**ಸೂಚನೆ:**

1. **ಸದಸ್ಯರು ತಾ॥ 15–09–2026ರ ಒಳಗಾಗಿ ಕಾರ್ಯಾಲಯಕ್ಕೆ ಅಂಕಪಟ್ಟಿಯ ಪ್ರತಿಯನ್ನು ಸಲ್ಲಿಸಿ ಸದಸ್ಯರು ತಮ್ಮ ಮಕ್ಕಳ ಹೆಸರು ನೋಂದಾಯಿಸಬೇಕಾಗಿ ವಿನಂತಿ.**
2. **ಪ್ರತಿಭಾ ಪುರಸ್ಕಾರ ಸ್ವೀಕಾರಕ್ಕೆ ವಿದ್ಯಾರ್ಥಿಗಳು ಪೋಷಕರೊಂದಿಗೆ ಕಡ್ಡಾಯವಾಗಿ ಹಾಜರಿರಬೇಕು.**

**ಸಭೆಯ ನಂತರ ಭೋಜನ ವ್ಯವಸ್ಥೆ ಇರುತ್ತದೆ.**